

ಮಾಡಿಕೊಂಡಿಲ್ಲ. ನಮ್ಮ ಸುತ್ತಲಿನ ನಿತ್ಯ ಬದುಕಿನ ಘಟನೆಗಳನ್ನೇ ಆಯ್ಕೆ ಮಾಡಿಕೊಳ್ಳುವುದರಿಂದ ನೇರವಾಗಿ ಮಾಡುತ್ತೇವೆ. ಕಥೆ ಅದಷ್ಟಕ್ಕೆ ಅದೇ ಬೆಳೆಯುತ್ತದೆ. ಮಲೆನಾಡಿನ ಸಂಸ್ಕೃತಿಯಲ್ಲಿ ಏಡಿ, ಹಲಸು ಮತ್ತು ಅಣಬೆಯ ಊಟೋಪಚಾರಕ್ಕೆ ವಿಶೇಷ ಸಂಭ್ರಮ ಇರುತ್ತದೆ. ಅಂತಹ ಕಂಟೆಂಟ್ ನಿರೂಪಿಸಿದ ರೀಲ್ಸ್ ಲಕ್ಷಾಂತರ ಜನ ನೋಡುತ್ತಿದ್ದರು. ಮೊದಲ ರೀಲ್ಸ್ ಮಾಡಿದಾಗ 4 ಸಾವಿರ ಫಾಲೋವರ್ಸ್ ಇದ್ದರು. ಈಗ 48 ಸಾವಿರ ತಲುಪಿದೆ. ನಮ್ಮ ರೀಲ್ಸ್ ವಾರದಲ್ಲಿ ಹತ್ತಿಪ್ಪತ್ತು ಲಕ್ಷ ವೀವ್ಸ್ ಬರುತ್ತಿತ್ತು. ಈಗ ಆ ಮಿತಿ ಮೀರಿದೆ.

ಬೆಂಗಳೂರಿನ ಬಾಡಿಗೆ ಮನೆಯ ಟೆರೇಸ್‌ನಲ್ಲಿ ಮೊದಲ ವಿಡಿಯೊ ಮಾಡಿದೆವು. ಮೇಕಪ್, ಜ್ಯುವೆಲ್ಸ್ ಧರಿಸಿ ಕ್ಯಾಮೆರಾ ಇಟ್ಟ ಮೇಲೆ ಮಾತನಾಡುವುದು ಏನೆಂದು ಯೋಚನೆ ಮಾಡಿದೆವು. ಯಾವುದೂ ಪೂರ್ವನಿಯೋಜಿತವಾಗಿ ಇರಲಿಲ್ಲ. ಆದರೆ ನಮ್ಮ ಆಯ್ಕೆಯ ವಸ್ತು ಮಾತ್ರ ಹಳ್ಳಿಯನ್ನು ಕೇಂದ್ರೀಕರಿಸಿತ್ತು. ಮಲೆನಾಡ ಮನೆಯ ಸುತ್ತಲೇ ಮಾತುಕತೆ ಇತ್ತು. ನಂತರ, ಯಾರದ್ದೋ ಮದುವೆ ಸಿದ್ಧತೆ, ತೋಟ, ಕೃಷಿಯ ಕೆಲಸ, ಮೀನು ಹಿಡಿಯುವುದು, ಅಡುಗೆ ವೈವಿಧ್ಯ, ಅತಿಥಿಗಳ ಸಂಭಾಷಣೆ ಹೀಗೆ ನಾನಾ ರೀತಿಯ ರೀಲ್ಸ್ ಮಾಡಿದೆವು. ಯಾವುದಕ್ಕೂ ಸಂಭಾಷಣೆ ಬರೆಯಲಿಲ್ಲ.



ಮೊದಲು ಒಂದೂವರೆ ನಿಮಿಷದ ರೀಲ್ಸ್ ಇತ್ತು. ಈಗ ಅದರ ಅವಧಿ 3 ನಿಮಿಷಗಳಿಗೆ ವಿಸ್ತಾರಗೊಂಡಿದೆ. ಊರಲ್ಲಿ ನಮ್ಮ ಅಕ್ಕನದು ಹಳೆ ಕಾಲದ ಮನೆ, ಈಗಲೂ ಸೌದೆ ಒಲೆ ಇದೆ. ಅಲ್ಲಿಯೂ ಅನೇಕ ಕಥೆಗಳನ್ನು ಕಟ್ಟಿದ್ದೇವೆ. ಚಿನ್ನಾ ಎಂದು ತಂಗಿಗೆ ಕರೆಯುವೆ. ಅವಳೇ ನನ್ನ ರೀಲ್ಸ್‌ಗೆ ಸಾಥಿ. ನಮ್ಮ ಕಡೆ ಏಡಿ ಶಿಕಾರಿ ಮತ್ತು ಅದನ್ನು ಸಂಭ್ರಮದಿಂದ ತಿನ್ನುವುದು ಹೆಮ್ಮೆಯ ಸಂಗತಿ. ಎಷ್ಟೇ ಶ್ರೀಮಂತರಿರಲಿ, 500 ಎಕರೆ ತೋಟದ ಮಾಲೀಕರಾಗಿದ್ದರೂ ಮಳೆಗಾಲದಲ್ಲಿ ಏಡಿ ಹಿಡಿಯಲು ಖುಷಿಯಿಂದ ಹೋಗುತ್ತಾರೆ. ಅಣಬೆ ತಿನ್ನುವ ಆಸೆ ಬಗ್ಗೆ ಒಂದು ಕಥೆ ಇದೆ. 'ಅಣಬೆ ಇಟ್ಟಿಲ್ಲ ಎಂದು ಅಣ್ಣಾ ತಮ್ಮನಿಗೆ ಹೊಡೆದನಂತೆ. ಹೊಟ್ಟೆ ಸೀಳಿ ನೋಡಿದರೆ ಒಂದೇ ಅಣಬೆ ಇತ್ತಂತೆ' ಈ ರೀತಿಯ ಕಥೆ ಕೇಳಿದ್ದ ನಾವು ರೀಲ್ಸ್ ಜಮಾನಕ್ಕೆ ಹೊಂದುವಂತೆ ಅಂತಹ ಕಥೆಯ ಸಾಲನ್ನು ಇಟ್ಟುಕೊಂಡು ರೂಪಿಸಿದ್ದೇವೆ.

ಯೂಟ್ಯೂಬ್‌ಗೆ ನಮ್ಮ ಕಂಟೆಂಟ್ ಹಾಕುತ್ತಿರಲಿಲ್ಲ. ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದೆವು. ಅದರಿಂದ ಆದಾಯವೂ ಬರುತ್ತದೆ. ಪ್ರೊಮೋಷನ್ ಕೂಡ ಬರುತ್ತವೆ. ಅದಕ್ಕೆ ನಾವೇ ಫೀ ತೆಗೆದುಕೊಳ್ಳುತ್ತೇವೆ. ಯೂಟ್ಯೂಬ್‌ಗೆ ಕಂಟೆಂಟ್ ಸ್ವಲ್ಪ ದೀರ್ಘವಾಗಿ ಮಾಡಬೇಕಾಗುತ್ತದೆ. ಕನಿಷ್ಠ ಐದಾರು ನಿಮಿಷವಾದರೂ ವಿಡಿಯೊ ಮಾಡಬೇಕು. ಅದೂ ನಮ್ಮ ಯೋಜನೆಯಲ್ಲಿ ಇದೆ. ಆದಾಯ ನಿರ್ದಿಷ್ಟವಾಗಿ ಇರುವುದಿಲ್ಲ. ಪ್ರಮೋಷನ್ ವಿಷಯದಲ್ಲಿ ಸಣ್ಣಪುಟ್ಟ ಅಂಗಡಿಯಿಂದ ಬೃಹತ್ ಉದ್ಯಮಗಳನ್ನೂ ಪರಿಚಯಿಸಲು ಸಿದ್ಧ ಇರಬೇಕು. ವೀಕ್ಷಕ ವಲಯ ಸಾಮಾನ್ಯವಾಗಿ ಇಷ್ಟಪಡುವುದು ಎರಡೇ ಸಂಗತಿ. ತುಂಬ ಬಡತನದ ಕರುಣಾಜನಕ ಕಥನ ಇಲ್ಲವೆ ಅತ್ಯಂತ ಶ್ರೀಮಂತಿಕೆಯ ಅದ್ದೂರಿಯನ್ನು ನೋಡಲು ಇಷ್ಟಪಡುತ್ತಾರೆ. ಮಧ್ಯಮ ವರ್ಗದ ಕಥೆಗಳು ಅಷ್ಟು ಆಕರ್ಷಿಸುವುದಿಲ್ಲ. ನೋಡಿದರೂ ನಿಧಾನವಾಗಿ ತಲುಪುತ್ತದೆ. ಆಭರಣ, ಸೀರೆ, ಕಾರು, ಬೈಕ್ ಒಳಗೊಂಡ ಕಂಟೆಂಟ್ ಅಲ್ಲಿ ಓಡುತ್ತದೆ. ಶಾಪ್, ಫುಡ್, ಜ್ಯುವೆಲರ್ಸ್ ಪ್ರೊಮೋಷನಿನಲ್ಲಿ ಆದಾಯ ಮಾಡಬಹುದು. ಸಾಮಾಜಿಕ ಮಾಧ್ಯಮಗಳಿಂದಲೇ ಆದಾಯ ಸೃಷ್ಟಿಸಿಕೊಳ್ಳಬಹುದು ಆದರೆ ತಾಳ್ಮೆ ಬಹಳ ಮುಖ್ಯ.

ಮುಂದೆ ಪಾಡ್‌ಕಾಸ್ಟ್ ಮಾಡಬೇಕು. ಅದಕ್ಕೆ ಸ್ಟುಡಿಯೊ, ಆಧುನಿಕ ಕ್ಯಾಮೆರಾ ಸೇರಿದಂತೆ ಒಂದಿಷ್ಟು ಸಿದ್ಧತೆಯನ್ನು ಮಾಡಿಕೊಳ್ಳಬೇಕಿದೆ. ರೀಲ್ಸ್ ಜನಪ್ರಿಯತೆಯನ್ನು ತಂದುಕೊಟ್ಟಿದೆ. ವಿಶ್ವವ್ಯಾಪಿಯ ಮಲೆನಾಡ ಜನ ಮೆಚ್ಚುಗೆ ಸಂದೇಶವನ್ನು ನೀಡುತ್ತಾರೆ. ಅನೇಕ ಅಧಿಕಾರಿಗಳು, ರಾಜಕಾರಣಿಗಳು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸಿಕ್ಕಾಗ 'ಇವರು ಸುಶೀಲಕ್ಕ ನನಗೆ ಗೊತ್ತು' ಎನ್ನುತ್ತಾರೆ. ಕರ್ನಾಟಕದ ಯಾವುದೇ ಮೂಲೆಗೇ ಹೋದರು ಗುರುತಿಸುತ್ತಾರೆ. ಅವರಿಗೆಲ್ಲ ಇನ್‌ಸ್ಟಾಗ್ರಾಮ್ ನನ್ನನ್ನು ಪರಿಚಯಿಸಿದೆ. ಲಕ್ಷಾಂತರ ಜನ ಫಾಲೋವರ್ಸ್ ಇಲ್ಲದೆ ಇದ್ದರೂ, ಮೂರು ದಿನಕ್ಕೆ 60 ಲಕ್ಷ ಜನ ನಮ್ಮ ಅನೇಕ ರೀಲ್ಸ್‌ಗಳನ್ನು ನೋಡಿದ್ದಾರೆ. ಅಂದಹಾಗೆ ತಂಗಿ ಹೆಸರು ಶಾನಿಕಾ. ಅಕ್ಕ ಸಿಂಚನಾ ಕೂಡ ನೆರವು ನೀಡಿದ್ದಾರೆ. ಅವರ ಅತ್ತೆ–ಮಾವ, ನನ್ನ ಅಮ್ಮ ಕೆಲ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ.

**ಕೊಂಡಿ: https://www.instagram.com/reel/DQBxJrkEeP/?igsh=amkxM24ydnFlc3Qy**

■